ಇ) ಸರ್ಕಾರ, ಅಫಿಷಿಯಲ್ ಸಮಿತಿ ರಚಿಸಿದ್ದಾನ ಪಾಲಿಸಿಯಂತೆ ಕೊಟ್ಟಿದೆ. ಇದರಲ್ಲಿ ಸಂಘಗಳ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಸಿಬ್ಬಂದಿ ವಿಸ್ತಾರಕ ಸೌಲಭ್ಯಗಳನ್ನು ಕೊಡಲು ಶಿಫಾರಸ್ಸು ಮಾಡಲಾಗಿದೆ. ಇದನ್ನು ಜಾರಿಗೆ ತರುವ ಬಗ್ಗೆ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರ ಸಾರಿಗೆ ಸಂಸ್ಥೆ ಅನುಭವಿಸಿರುವ ನಷ್ಟ?

3329 - ಶ್ರೀ ಎಲ್. ಆರ್ ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯ ಈವರೆಗೆ ಅನುಭವಿಸಿರುವ ನಷ್ಟದ ಮೊತ್ತವೆಷ್ಟು?

ಆ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯನ್ನು ದೆಹಲಿ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಖಾಸಗೀಕರಣಗೊಳಿಸಲು ಸರ್ಕಾರ ಯೋಚಿಸಿದೆಯೇ?

ಇ) ಬೆಂಗಳೂರು ನಗರ ಸಾರಿಗೆ ಸೇವೆಯನ್ನು ಉತ್ತಮಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) 1989-90ರವರೆಗೆ 104.95 ಕೋಟಿ ರೂಪಾಯಿಗಳು.

ಆ) ಇಲ್ಲ.

ಇ)

1) ಅನುಸೂಚಿಗಳನ್ನು ಹೆಚ್ಚಿಸಲು ಹೆಚ್ಚುವರಿ ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಲಾಗುವುದು.

2) ೧೫೫ ಹೆಚ್ಚು ಬಸ್ಸುಗಳನ್ನು ಈ ವರ್ಷ ಸೇರಿಸಲಾಗುವುದು.

3) ವಿಶ್ರಾಂತಿ ಅವಧಿಯನ್ನು ಕಡಿಮೆಗೊಳಿಸಿ ಟ್ರಿಪ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

4) ಸಿಬ್ಬಂದಿಗಳ ಗುಣಮಟ್ಟವನ್ನು ಹೆಚ್ಚಿಸಲು ಅಲ್ಪಾವಧಿಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

5) ಹಣ ಸೋರುವಿಕೆಯನ್ನು ತಡೆಗಟ್ಟಲು ತನಿಖಾ ತಂಡದ ಕಾರ್ಯಚಟುವಟಿಯನ್ನು ಚುರುಕು ಗೊಳಿಸಲಾಗುವುದು.

6) ರಸ್ತೆಯನ್ನು ಚೆನ್ನಾಗಿಡುವಂತೆ ನೋಡಿಕಕೊಳ್ಳಲು ಮಹಾನಗರ ಪಾಲಿಕೆಯನ್ನು ಒತ್ತಿಸಲಾಗುವುದು.

7) ಕಛೇರಿ ಮತ್ತು ಶಾಲಾ ವೇಳೆಯನ್ನು ಹಂಚಲು ಸರ್ಕಾರವನ್ನು ಕೋರಲಾಗುವುದು.

ಆರ್. ಟಿ. ಓ. ಕಛೇರಿಗಳಲ್ಲಿ ಗಣಕೀಕರಣ

3325 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಆರ್. ಟಿ. ಓ. ಕಛೇರಿಗಳಲ್ಲಿ ಗಣಕೀಕರಣದ ಕಾರ್ಯಕ್ರಮವನ್ನು ಎಷ್ಟು ಜಿಲ್ಲೆಗಳಿಗೆ ಪೂರೈಸಲಾಗಿದೆ?

ಆ) ಈ ಗಣಕೀಕರಣ ಕಾರ್ಯಕ್ರಮಗಳಿಗಾಗಿ ಸರ್ಕಾರ ಇವರೆಗೆ ವಿಚ್ಚು ಮಾಡಿದ ಹಣವೆಷ್ಟು?

ಇ) ಸಾರಿಗೆ ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಪ್ರತಿ ತಾಲ್ಲೂಕಿಗೂ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :